**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ರವರ ನಿಯಮ 72ರಡಿಯ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ:**

**ಮೈಸೂರು ಜಿಲ್ಲೆ ಟಿ.ನರಸೀಪುರದಲ್ಲಿ ನಡೆದ ಹನುಮ ಜಯಂತಿಯ ಸಮಾರಂಭಕ್ಕೆ ಸಂಬಂಧಿಸಿದಂತೆ ಯುವಕ ವೇಣುಗೋಪಾಲ ರವರ ಹತ್ಯೆ ಪ್ರಕರಣದಲ್ಲಿ ಪೋಲೀಸ್ ಇಲಾಖೆಯ ವೈಫಲ್ಯತೆ, ಮೃತರ ಕುಟುಂಬಕ್ಕೆ ಪರಿಹಾರ ಹಾಗೂ ಕಾನೂನು ಸುವ್ಯವಸ್ಥೆ ಬಗ್ಗೆ**

**ಉತ್ತರ:**

ವೇಣುಗೋಪಾಲ ಬಿನ್ ನಾಗರಾಜು, 31 ವರ್ಷ, ನಾಯಕ ಜನಾಂಗ, ಚಿಕ್ಕಅಂಗಡಿ ಬೀದಿ, ಟಿ.ನರಸೀಪುರ ಪಟ್ಟಣ ಎಂಬುವರು ದಿನಾಂಕ: 09.07.2023 ರಂದು ಹತ್ಯೆಯಾಗಿರುವ ಬಗ್ಗೆ ಪಿರ್ಯಾದಿ ರಾಮಾನುಜಂ ರವರು ನೀಡಿದ ದೂರಿನ ಮೇರೆಗೆ ಟಿ.ನರಸೀಪುರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 173/2023 ಕಲಂ 143, 147, 148, 504, 307, 302 ರೆ.ವಿ. 149 ಐ.ಪಿ.ಸಿ ಮತ್ತು ಕಲಂ 3(2) V ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯ್ದೆ 2015 ರ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಘಟನಾ ಸ್ಥಳಕ್ಕೆ ಪೋಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ರವರು ಹಾಗೂ ಪೋಲೀಸ್ ಉಪ ಮಹಾನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ರವರು ಭೇಟಿ ನೀಡಿ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಲ್ಲಾ ಆಯಾಮಗಳಲ್ಲಿ ತನಿಖೆ ಮಾಡುವ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಿ, ನಿಗಾ ವಹಿಸಲಾಗಿದೆ. ದಿನಾಂಕ:10.07.2023 ರಂದು ಮೈಸೂರಿನ ಸರ್ಕಾರಿ ಮೆಡಿಕಲ್ ಶವಗಾರದಲ್ಲಿ ಮೃತ ವೇಣುಗೋಪಾಲ ರವರ ವೈದ್ಯಕೀಯ ಮರಣೋತ್ತರ ಶವಪರೀಕ್ಷೆ ನಡೆದಿದ್ದು, ನಂತರ ಮೃತ ದೇಹವನ್ನು ಅಂತ್ಯಸಂಸ್ಕಾರಕ್ಕಾಗಿ ಟಿ.ನರಸೀಪುರಕ್ಕೆ ತೆಗೆದುಕೊಂಡು ಹೋಗಿದ್ದು, ಅಂತ್ಯಸಂಸ್ಕಾರವು ಶಾಂತಿಯುತವಾಗಿ ಮುಗಿದಿರುತ್ತದೆ. ಮೃತ ವೇಣುಗೋಪಾಲನ ಅಂತ್ಯಸಂಸ್ಕಾರದ ನಂತರ ಮೃತನ ಪತ್ನಿ ಮತ್ತು ಸಂಬಂಧಿಕರು ಹಾಗೂ ಸ್ಥಳೀಯ ಮುಖಂಡರುಗಳ ಜೊತೆ ಸಂಪರ್ಕದಲ್ಲಿದ್ದು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

ದಿನಾಂಕ:10.07.2023 ರಂದು ಈ ಪ್ರಕರಣದಲ್ಲಿ ಈಗಾಗಲೇ ಈ ಕೆಳಕಂಡ 06 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ.

(1) ಮಣಿಕಂಠಸ್ವಾಮಿ @ ಮಣಿ @ ಕೂಳೆ ಮಣಿ ಬಿನ್ ಸಿದ್ದಪ್ಪ, (2) ಸಂದೇಶ ಕುಮಾರ್ ಬಿನ್ ಸ್ವಾಮಿನಾಥನ್, (3) ಅನಿಲ್ ಬಿನ್ ಲೇಟ್.ಮಹದೇವ, (4) ಶಂಕರ @ ಶಂಕರೇಗೌಡ @ ತುಪ್ಪ ಬಿನ್ ಮಹದೇವಪ್ಪ, (5) ಮಂಜು @ ಮಂಜುನಾಥ್ ಬಿನ್ ಪುಟ್ಟಸ್ವಾಮಿ, (6) ಹ್ಯಾರಿಸ್ @ ಮಹಮದ್ ಹ್ಯಾರಿಸ್ ಬಿನ್ ಸರ್ತಾಜ್ ಪಾಷ ರವರುಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ತನಿಖೆಯು ಪ್ರಗತಿಯಲ್ಲಿರುತ್ತದೆ.

ಈ ಪ್ರಕರಣವು ಎಸ್.ಸಿ./ಎಸ್.ಟಿ. ದೌರ್ಜನ್ಯ ತಡೆ ಕಾಯ್ದೆ ಅಡಿ ದಾಖಲಾಗಿದ್ದು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಪತ್ರ ಬರೆಯಲಾಗಿದೆ.

ಟಿ.ನರಸೀಪುರ ಪೋಲೀಸ್ ಠಾಣೆಯ ಪೋಲೀಸ್ ಇನ್ಸ್‌ಪೆಕ್ಟರ್ ಹಾಗೂ ಗುಪ್ತಮಾಹಿತಿ ಸಿಬ್ಬಂದಿರವರು ಹನುಮ ಜಯಂತಿಯ ಬಂದೋಬಸ್ತ್ ಕರ್ತವ್ಯದ ಸಮಯದಲ್ಲಿ ಸೂಕ್ತ ಮುನ್ನೆಚ್ಚರಿಕೆ ಹಾಗೂ ಮುಂಗಡ ಮಾಹಿತಿ ಸಂಗ್ರಹಣೆ ಮಾಡದೇ ಇರುವ ಬಗ್ಗೆ ಹಾಗೂ ಮೇಲಾಧಿಕಾರಿಗಳ ಗಮನಕ್ಕೆ ಮಾಹಿತಿಯನ್ನು ತಿಳಿಸದೇ ನಿರ್ಲಕ್ಷ್ಯತೆ ವಹಿಸಿರುವ ಬಗ್ಗೆ ಸದರಿಯವರುಗಳನ್ನು ಅಮಾನತ್ತುಪಡಿಸಿ ಇಲಾಖಾ ವಿಚಾರಣೆ ಕೈಗೊಳ್ಳಲಾಗಿದೆ. ಟಿ.ನರಸೀಪುರ ಪಟ್ಟಣದಲ್ಲಿ ಪ್ರಸ್ತುತ ಶಾಂತ ಪರಿಸ್ಥಿತಿ ಇದ್ದು, ಮುಂಜಾಗ್ರತಾ ಕ್ರಮವಾಗಿ ಸೂಕ್ತ ಪೋಲೀಸ್ ಬಂದೋಬಸ್ತ್ ವ್ಯವಸ್ಥೆ ಮುಂದುವರೆಸಲಾಗಿದೆ.

HD 19 SDN 2023

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು